# ಬೆಳ್ಳಿ ಕಿರಣ

**ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಕಿರಣ್ ನಾಯಕ್, ರಂಗಭೂಮಿ ಮತ್ತು ಸಿನಿಮಾ ಎರಡರಲ್ಲಿಯೂ ಸಕ್ರಿಯವಾಗಿರುವ ಪ್ರತಿಭೆ. ರಂಗಭೂಮಿಯಲ್ಲಿ ಕಲಿತಿದ್ದನ್ನು ಕ್ಯಾಮೆರಾ ಎದುರು ಧಾರೆ ಎರೆಯುತ್ತಿರುವ ಆವರಿಗೆ ಉತ್ತಮ ಪೋಷಕನಟನಾಗಿ ಗುರ್ತಿಸಿಕೊಳ್ಳುವ ಎಲ್ಲ ಅರ್ಹತೆಗಳೂ ಇವೆ.**

■ ಪದ್ಮನಾಭ ಭಟ್

ಬಿ.ಎ. ಪದವಿ ಮುಗಿದಾಕ್ಷಣ ಎಲ್ಲರೂ ಎಂ.ಎ. ಸೀಟ್ ಹಿಡಿಯಲಿಕ್ಕೋ, ಡಿಗ್ರಿ ಮೇಲೆ ನೌಕರಿ ಸಂಪಾದಿಸಲಿಕ್ಕೋ ಒದ್ದಾಡುತ್ತಿದ್ದರೆ ಕಿರಣ್ ಮಾತ್ರ ಮನೆಗೆ ಬಂದು, 'ನಾನು ನೀನಾಸಮ್‌ಗೆ ಹೋಗ್ತೇನೆ' ಎಂದಿದ್ದರು. ಅದಕ್ಕೆ ಮನೆಯವರು ಕೇಳಿದ ಮೊದಲ ಪ್ರಶ್ನೆ, 'ಹಾಗಂದ್ರೆ ಏನು?'. ನೀನಾಸಮ್ ರೆಪರ್ಟರಿ ಎಂಬುದು ಮನೆಯವರಿಗೆ ಬಿಡಿ, ಸ್ವತಃ ಕಿರಣ್ ಅವರಿಗೇ ಎರಡು ವರ್ಷ ಮುಂಚೆ ಗೊತ್ತಿರಲಿಲ್ಲ. ಕಿರಣ್, ನೀನಾಸಮ್ ಕುರಿತು ತಿಳಿದುಕೊಂಡಿದ್ದೂ ಸ್ವಾರಸ್ಯಕರ ಪ್ರಸಂಗ.

'ನಾನಾಗ ಬಿ.ಎ. ಮೊದಲ ವರ್ಷದಲ್ಲಿದ್ದೆ. ನಮ್ಮ ಕಾಲೇಜಿನಲ್ಲಿ ನೀನಾಸಮ್ ತಿರುಗಾಟ ನಾಟಕ ಇತ್ತು. ಅದುವರೆಗೆ ನನಗೆ ನೀನಾಸಮ್ ಬಗ್ಗೆ ಏನೂ ಗೊತ್ತಿರಲಿಲ್ಲ. ನನ್ನನ್ನು ಸ್ಟೇಜಿನ ಸರೀ ಎದುರಿನ ಗೇಟ್‌ನಲ್ಲಿಯೇ ಗೇಟ್‌ಕೀಪರ್ ಆಗಿ ನಿಲ್ಲಿಸಿದ್ದರು. ಅವರ ಸ್ಟೇಜು, ಲೈಟು, ಪಾಪರ್ಟಿಗಳೆಲ್ಲ ನೋಡಿ ಮೋಜೆನಿಸುತ್ತಿತ್ತು. ಮೊದಲು ಗಂಟೆ ಹೊಡೆಯಿತು. ಪ್ರಾರ್ಥನೆ ಕೇಳಿಸಿತು. ನಾಟಕ ಶುರುವಾಯ್ತು... ಸ್ವಲ್ಪೇ ಹೊತ್ತಿನಲ್ಲಿ ಗೇಟ್ ಬಳಿಯಿದ್ದ ನಾನು ಕುರ್ಚಿಯ ಮೇಲೆ ಕೂತಿದ್ದೆ. ಇಡೀ ನಾಟಕವನ್ನು ಕಣ್ರೆಪ್ಪೆ ಅಲುಗಾಡಿಸದೇ ಮೈಮರೆತು ನೋಡಿದೆ. ನಾಟಕದ ಕುರಿತು ನನಗಿದ್ದ ಪರಿಕಲ್ಪನೆಯೇ ಬದಲಾದ ದಿನ ಅದು. ಅಲ್ಲಿ ಮೂರು ದಿನ 'ಜತೆಗಿರುವನು ಚಂದಿರ', 'ಮಹಾತ್ಮ', 'ಸಹ್ಯಾದ್ರಿ ಕಾಂಡ' ಮೂರು ನಾಟಕಗಳು ನಡೆದವು. ಅಚ್ಯುತ್ ಕುಮಾರ್, ಅನಿಲ್, ಧರ್ಮೇಂದ್ರ ಅರಸ್ ಎಲ್ಲ ನಟಿಸಿದ್ದರು. ಮರುದಿನ ಅವರನ್ನು ಭೇಟಿಯಾಗಿ ನೀನಾಸಮ್ ಬಗ್ಗೆ ಮಾಹಿತಿ ತೆಗೆದುಕೊಂಡೆ. ಮುಂದೊಂದು ದಿನ ನಾನು ನೀನಾಸಮ್ ವಿದ್ಯಾರ್ಥಿ ಆಗಬೇಕು ಎಂಬ ನಿರ್ಧಾರ ಮಾಡಿದೆ' ಎಂದು ಆ ಪ್ರಸಂಗವನ್ನು ನೆನಪಿಸಿಕೊಳ್ಳುತ್ತಾರೆ ಕಿರಣ್.

ಬಿ.ಎ. ಮುಗಿದ ಮೇಲೆ ನೀನಾಸಮ್‌ನಲ್ಲಿ ಒಂದು ವರ್ಷದ ಕೋರ್ಸ್ ಮುಗಿಸಿದ ಕಿರಣ್, 'ತಿರುಗಾಟ'ದಲ್ಲಿ ರಾಜ್ಯಪರ್ಯಟನೆಯನ್ನೂ ಮಾಡಿದರು. ನಂತರ ಊರಿಗೆ ಮರಳಿ ಕೃಷಿ ಕೆಲಸದಲ್ಲಿ ತೊಡಗಿಕೊಂಡರು. ಇದೇ ಸಮಯದಲ್ಲಿ ಅವರಿಗೆ ನಾಗಾಭರಣ ಅವರ ನಿರ್ದೇಶನದ 'ಗೆಳತಿ' ಧಾರಾವಾಹಿಯಲ್ಲಿ ನಟಿಸುವ ಅವಕಾಶ ಸಿಕ್ಕಿತು. ಊರಿನಿಂದಲೇ ಬೆಂಗಳೂರಿಗೆ ಬಂದು ಹೋಗಿ ಧಾರಾವಾಹಿಯಲ್ಲಿ ನಟಿಸಿದರು. ನಂತರ ಏಣಗಿ ನಟರಾಜ್ ಅವರ 'ಇದು ಎಂಥ ಲೋಕವಯ್ಯಾ' ಧಾರಾವಾಹಿಯಲ್ಲಿಯೂ ನಟಿಸಿದರು. ಈ ನಡುವೆ 'ಆತ್ಮಸಾಕ್ಷಿ' ಎಂಬ ಸಿನಿಮಾದಲ್ಲಿ ನಟಿಸುವ ಅವಕಾಶವನ್ನೂ ಊರಲ್ಲಿದ್ದಾಗಲೇ ಪಡೆದುಕೊಂಡರು.

ಹತ್ತು ವರ್ಷಗಳ ಕಾಲ ಊರಿನಲ್ಲಿ ಕೃಷಿಯಲ್ಲಿ ತೊಡಗಿಕೊಂಡಿದ್ದ ಕಿರಣ್ 2011ರಲ್ಲಿ ನಟನೆಯನ್ನು ನೆಚ್ಚಿ ಬೆಂಗಳೂರಿಗೆ ಬಂದು ಇಲ್ಲಿಯೇ ನೆಲೆಸಿದ್ದಾರೆ. ತಮಗೆ ಸಿಕ್ಕ ಪಾತ್ರ ಚಿಕ್ಕದಾಗಿರಲಿ, ದೊಡ್ಡದಾಗಿರಲಿ ಶ್ರದ್ಧೆಯಿಂದ ನಟಿಸಿ ಸೈ ಎನಿಸಿಕೊಳ್ಳುತ್ತಿದ್ದಾರೆ.

ಹಾಸ್ಯ ಪಾತ್ರಗಳೇ ಹೆಚ್ಚಾಗಿ ಅರಸಿಕೊಂಡು ಬರುತ್ತಿದ್ದ ಕಾಲದಲ್ಲಿ ರಾಘು ಶಿವಮೊಗ್ಗ ತಮ್ಮ 'ಚೌಕಾಬಾರಾ' ಕಿರುಚಿತ್ರದಲ್ಲಿ ಖಳನಟನ ಪಾತ್ರ ಕೊಟ್ಟಿದ್ದನ್ನು ಅವರು ವಿಶೇಷವಾಗಿ ಸ್ಮರಿಸಿಕೊಳ್ಳುತ್ತಾರೆ. ಇದುವರೆಗೆ ಅವರು ನಟಿಸಿದ ಪಾತ್ರಗಳಲ್ಲಿ ಸ್ವತಃ ಕಿರಣ್ ಅವರಿಗೇ ನೆಚ್ಚು ಅನಿಸಿದ್ದು ಗಿರಿರಾಜ್ ನಿರ್ದೇಶನದ 'ಅಮರಾವತಿ' ಚಿತ್ರದಲ್ಲಿನ ಪೌಲ್ ಜಾನ್ ಎಂಬ ಆ್ಯಕ್ಟಿವಿಸ್ಟ್ ಪಾತ್ರ. 'ಗಿರಿ ಅವರ ಮೂರು ಸಿನಿಮಾಗಳಲ್ಲಿಯೂ ನಾನು ಬೇರೆ ಬೇರೆ ರೀತಿಯ ಪಾತ್ರದಲ್ಲಿ ನಟಿಸಿದ್ದೇನೆ. ಆದರೆ ನಾನು ತುಂಬ ಇಷ್ಟಪಟ್ಟು ಮಾಡಿದ ಪಾತ್ರ 'ಅಮರಾವತಿ' ಸಿನಿಮಾದ್ದು' ಎನ್ನುತ್ತಾರೆ ಕಿರಣ್.

ತಾವು ಮುಖ್ಯಪಾತ್ರದಲ್ಲಿ ನಟಿಸಿರುವ 'ವಧು ಬೇಕಾಗಿದೆ' ಎಂಬ ಚಿತ್ರದ ಬಿಡುಗಡೆಗೆ ಕಾಯುತ್ತಿರುವ ಕಿರಣ್, 'ಅವನೇ ಶ್ರೀಮನ್ನಾರಾಯಣ' ಸಿನಿಮಾದಲ್ಲಿಯೂ ಒಂದು ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

'ಸದ್ಯಕ್ಕೆ ಪುನೀತ್ ಅವರ 'ಯುವರತ್ನ' ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಮಂಸೋರೆ ಅವರ ಹೊಸ ಸಿನಿಮಾದಲ್ಲಿಯೂ ನಟಿಸುವ ಅವಕಾಶ ಸಿಕ್ಕಿದೆ' ಎನ್ನುವ ಕಿರಣ್, ತನಗೆ ಸಿಕ್ಕ ಪಾತ್ರಕ್ಕೆ ಎಲ್ಲ ಎಫರ್ಟ್ ಹಾಕಿ ನಟಿಸಿದರೆ ಅದೇ ಮತ್ತೊಂದು ಅವಕಾಶವನ್ನು ತಂದುಕೊಡುತ್ತದೆ ಎಂದು ನಂಬಿದ್ದಾರೆ. ಈ ನಂಬಿಕೆಯ ಬಲದಿಂದಲೇ ಚಂದನವನದೊಳಗೆ ಇನ್ನಷ್ಟು ಕಾಲ ವೈವಿಧ್ಯದ ಪಾತ್ರಗಳಲ್ಲಿ ಮಿಂಚುವ ಅಭಿಲಾಷೆಯನ್ನು ಮನಸಲ್ಲಿ ಹೊತ್ತು ನಡೆಯುತ್ತಿದ್ದಾರೆ. ■

